ಅ) ಅಂಗವಿಕಲರಿಗೆ ಹಾಗೂ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಅರ್ಹ ಫಲಾನುಭವಿಗಳಿಗೆ ಮಾಸಾಶನ ಪಾವತಿ ಸ್ಥಗಿತಗೊಳಿಸಿರುವುದಿಲ್ಲ.

ಆ) ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಭೌತಿಕ ಪರಿಶೀಲನಾ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದ್ದ ಕಾರಣ ಹೊಸ ಮಂಜೂರಾತಿ ಕಾರ್ಯವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು. ಆದರೆ ಈಗಾಗಲೇ ದಿನಾಂಕ: 06/01/2012 ರಿಂದ ರಾಜ್ಯದ್ಯಾಂತ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಹೊಸ ಮಂಜೂರಾತಿ ಕಾರ್ಯವನ್ನು ಪ್ರಾರಂಭಿಸಲಾಗಿರುತ್ತದೆ.

ಹೊಸ ಮಂಜೂರಾತಿ ಕಾರ್ಯದಲ್ಲಿ ಯಾವುದೇ ಸಮಸ್ಯೆಗಳಿರುವುದಿಲ್ಲ.

ಕೈಗಾರಿಕಾ ಪ್ರದೇಶದಲ್ಲಿ ಅಂತರರ್ಜಲ ಕಲುಷಿತ

258 (562) ಶ್ರೀ ನರಸಿಂಹಸ್ವಾಮಿ ಜೆ. (ದೊಡ್ಡಬಳ್ಳಾಪುರ ಕ್ಷೇತ್ರ) :– ಮಾನ್ಯ ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ಯೋಜನೆ ಮತ್ತು ಸಾಂಖ್ಯಿಕ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬಾಶೆಟ್ಟಿಹಳ್ಳಿ, ದೊಡ್ಡಬಳ್ಳಾಪುರ ತಾಲ್ಲೂಕು ಕೈಗಾರಿಕಾ ಪ್ರದೇಶದಲ್ಲಿ ಅಂತರ್ಜಲ ಕಲುಶಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದರೆ, ಅದರ ಶುದ್ಧೀಕರಣಕ್ಕೆ ಸರ್ಕಾರ ಏನು ಕ್ರಮ ವಹಿಸಿದೆ ;

(ಆ) ದೊಡ್ಡಬಳ್ಳಾಪುರ ತಾಲ್ಲೂಕು, ಸಾಸಲು ಹೋಬಳಿ, ಬೊಮ್ಮೇನಹಳ್ಳಿ ಗ್ರಾಮದ ಹತ್ತಿರ ಟೆರ್ರಾ ಫಾರಂ ರವರಿಂದ ಬೆಂಗಳೂರು ನಗರದ ಘನ ತ್ಯಾಜ್ಯ ಸಂಗ್ರಹವಾಗಿ ಕಲುಶಿತವಾಗಿ ರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಆ ಭಾಗದಲ್ಲಿ ಮಾನವ ಸಂಕುಲ, ಪ್ರಾಣಿ ಸಂಕುಲ ಸಂಕಷ್ಟಕ್ಕೆ ಗುರಿಯಾಗಿದ್ದು, ಸರ್ಕಾರ ಈ ಬಗ್ಗೆ ಏನು ಕ್ರಮ ಕೈಗೊಂಡಿದೆ ?

ಶ್ರೀ ಎಸ್. ಶಿವಣ್ಣ (ಮಾನ್ಯ ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ಯೋಜನೆ ಮತ್ತು ಸಾಂಖ್ಯಿಕ ಸಚಿವರು):–

(ಅ) i) ದೊಡ್ಡಬಳ್ಳಾಪುರ ತಾಲ್ಲೂಕಿನ ಬಾಶೆಟ್ಟಹಳ್ಳಿ, ಕೈಗಾರಿಕಾ ಪ್ರದೇಶದಲ್ಲಿ ಅಂತರ್ಜಲ ಭಾಗಶ ಕಲುಷಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ii) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (KIADB) ಸಾಮಾನ್ಯ ತ್ಯಾಜ್ಯ ನೀರು ಸಂಸ್ಕರಣಾ ಘಟಕ

(CETP) ದ ಸಮೀಪ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿರುವ ಕೊಳವೆ ಬಾವಿಗಳಲ್ಲಿ ನೀರನ್ನು ಸಂಗ್ರಹಿಸಿ ವಿಶ್ಲೇಷಣೆ ಮಾಡಿದ್ದು, ಅದರಂತೆ ಕರಗಿದ ಘನಪದಾರ್ಥಗಳು (Dissolved Solids), ಕ್ಯಾಲ್ಸಿಯಂ (Calcium), ಕ್ಲೋರೈಡ್ (Chloride), ಹಾರ್ಡ್‌ನೆಸ್ (Hardness) ಮತ್ತು ಆಲ್ಕಲಿನಿಟಿ (Alkalinity) ನಿಗದಿತ ಪರಿಮಿತಿಗಿಂತ ಸ್ವಲ್ಪ ಪ್ರಮಾಣದಲ್ಲಿ ಜಾಸ್ತಿ ಇರುವುದನ್ನು ಗಮನಿಸಿದೆ.

iii) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸದರಿ ಪ್ರದೇಶದಲ್ಲಿ ಅಂತರ್ಜಲ ಕಲುಷಿತವಾಗದಂತೆ ತಡೆಗಟ್ಟಲು, ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

1. ಸಾಮಾನ್ಯ ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು ಮಾನಿಟರ್ ಮಾಡಲು ಸಂಬಂಧಪಟ್ಟ ಅಧಿಕಾರಿಗಳು, ಸರ್ಕಾರೇತರ ಸಂಸ್ಥೆಗಳು ಮತ್ತು ಗ್ರಾಮ ಪಂಚಾಯತಿ ಅಧ್ಯಕ್ಷರನ್ನೊಳಗೊಂಡ ಕಾವಲು ಸಮಿತಿಯನ್ನು ರಚಿಸಲಾಗಿದೆ.

2. ಅಪರೇಲ್ ಪಾರ್ಕ್‌ನಲ್ಲಿರುವ 13 ಕೈಗಾರಿಕೆಗಳಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲ ಕಾಯ್ದೆಯ 32(1) (C) ಪ್ರಕಾರ ತ್ಯಾಜ್ಯ ನೀರನ್ನು ಹೊರಗೆ ವಿಸರ್ಜಿಸಬಾರದೆಂದು ನಿರ್ಭಂದ ವಿಧಿಸಿರುತ್ತಾರೆ.

3. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (KIADB) ಯವರು ಸ್ಥಾಪಿಸಿರುವ ಸಾಮಾನ್ಯ ತ್ಯಾಜ್ಯ ನೀರು ಸಂಸ್ಕರಣಾ ಘಟಕವು ಸರಿಯಾಗಿ ಕಾರ್ಯ ನಿರ್ವಹಿಸದೇ ಇದ್ದುದರಿಂದ, ಸದರಿ ಮಂಡಳಿರವರನ್ನು ಮೌಖಿಕ ವಿಚಾರಣೆಗೆ ಕರೆದು, ತ್ಯಾಜ್ಯ ನೀರನ್ನು ಹೊರಗೆ ವಿಸರ್ಜಿಸಬಾರದೆಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ನಿರ್ದೇಶನ ನೀಡಿರುತ್ತದೆ. ಮತ್ತು ಎಲ್ಲಾ ಸಂಸ್ಕರಿಸಿರುವ ತ್ಯಾಜ್ಯ ನೀರನ್ನು ಪುನರ್ ಬಳಕೆ ಮಾಡಲು ಸೂಚಿಸಿರುತ್ತದೆ.

(ಆ) i) ದೊಡ್ಡಬಳ್ಳಾಪುರ ತಾಲ್ಲೂಕು, ದೊಡ್ಡಬೆಳವಂಗಲ ಹೋಬಳಿ, ಗುಂಡಳಹಳ್ಳಿ, ಸರ್ವೆ ನಂ. 1.2, 40/3A, 40/3B, 52A/B, 7P/11, 3/2, 6, 6/P3, 4, 40/1, 6/P2 , 38/6, ರಲ್ಲಿನ 93 ಎಕರೆ ಪ್ರದೇಶದಲ್ಲಿ ಮೆ॥ ಟೆರ್ರಾ ಫಾರ್ಮ ಬಯೋಟೆಕ್ನಾಲಜೀ ಲಿ., ಎಂಬ ಉದ್ದಿಮೆಯವರು 1,000 Tonnes /Day ಸಾಮರ್ಥ್ಯದ ಘನತ್ಯಾಜ್ಯ ವಸ್ತು ವಿಲೇವಾರಿ ಘಟಕವನ್ನು ಸ್ಥಾಪಿಸಲು ಅನುಮತಿ ಪಡೆದಿರುತ್ತದೆ.

ii) ಈ ಕಾರ್ಯಕ್ಕೆ ಬೆಂಗಳೂರು ಮಹಾನಗರ ಪಾಲಿಕೆಯ ಸಹಯೋಗದೊಂದಿಗೆ, ಪಾಲಿಕೆಯ ಪ್ರದೇಶದಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯ ವಸ್ತುಗಳನ್ನು Vermicompost,

Compost, Bio-Gas ಉತ್ಪಾದಿಸಲು ಹಾಗೂ ಪ್ಲಾಸ್ಟಿಕ್ ವಿಂಗಡಿಸಲು ಮತ್ತು landfill ಗೆ ವೈಜ್ಞಾನಿಕವಾಗಿ ವಿಲೇ ಮಾಡಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ದಿನಾಂಕ: 31-12-2011 ರವರಿಗೆ ಅಧಿಕಾರ ಪತ್ರ ನೀಡಲಾಗಿದೆ. ಈ ಪತ್ರದನ್ವಯ, ಸದರಿ ಸಂಸ್ಥೆಯು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಷರತ್ತು ಬದ್ಧ ನಿಯಮಾವಳಿಯನ್ನು ಪಾಲಿಸಬೇಕಾಗಿರುತ್ತದೆ. ಈ ಸಂಸ್ಥೆಯು ಕಳೆದ 2 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಯು ನಿಯಮಾನುಸಾರ ಆಗಿಂದ್ದಾಗ್ಗೆ ಪರಿವೀಕ್ಷಣೆ ಮಾಡಿ, ಸಂಸ್ಥೆಯು ತೆಗೆದುಕೊಂಡಿರುವ ಕ್ರಮಗಳನ್ನು ಖಾತ್ರಿ ಪಡಿಸಿಕೊಂಡಿರುತ್ತದೆ.

iii) ಕಲುಷಿತ ನೀರಿನ ಪ್ರಭಾವದಿಂದ ಜನ-ಜಾನುವಾರು ಅನಾರೋಗ್ಯದಿಂದ ನರಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಹುದ್ದೆಗಳ ವಿವರ

210 (886) ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ) :- ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

(ಅ) ಪಶುಸಂಗೋಪನಾ ಇಲಾಖೆಯಲ್ಲಿ ಮಂಜೂರಾದ ಭರ್ತಿಯಾದ ಹಾಗೂ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು, ಹುದ್ದೆವಾರು ವಿವರ ಒದಗಿಸುವುದು)

(ಆ) ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ನಿಯೋಜಿಸಲಾದ ಹುದ್ದೆಗಳ ಸಂಖ್ಯೆ ಎಷ್ಟು; ಯಾವುವು ಹಾಗೂ ಯಾವ ಕಾರಣದಿಂದ ನಿಯೋಜಿಸಲಾಗಿದೆ; (ವಿವರ ನೀಡುವುದು) ;

(ಇ) ಭಾರತೀಯ ಆಡಳಿತ ಸೇವೆ ಅಧಿಕಾರ ವರ್ಗದ ಆಯುಕ್ತರ ಹುದ್ದೆಯನ್ನು ಪಶು ಸಂಗೋಪನಾ ಇಲಾಖಾ ಸಮಗ್ರ ಪುನರ್ ರಚನೆ ಅಂಗವಾಗಿ ಸೃಷ್ಟಿಸಿರುವುದು ನಿಜವೇ; ಸದರಿ ಹುದ್ದೆಯನ್ನು ಸೃಷ್ಟಿಸಿ ಎಷ್ಟು ವರ್ಷಗಳಾದವು; ಸಮಗ್ರ ಪುನರ್ ರಚನೆ ಯಾವಾಗ ಮಾಡಲಾಗುವುದು?

ಶ್ರೀ ರೇವೂನಾಯಕ್ ಬೆಳಮಗಿ (ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು):-